


ಮುಗೀತು. ನವವಧುಗಳು ಮಂಗಳಗೌರಿ ಪೂಜಾ ಮಾಡಿ, ಗುಂಪುಗುಂಪಾಗಿ ಬಾಜಾಬಜಂತ್ರಿ ಸಮೇತ ಈಶ್ವರನ ಗುಡಿಗೆ ಹೋಗಿಬರ್ತಾರ. ರಾತ್ರೆಲ್ಲಾ ಜಾಗರಣೆ ಮಾಡಿ ಮಂಗಳಗೌರಿ ಆಟಗೊಳ್ಳ ಆಡ್ತಾರ.

ಬೆಳಗಾವಿ ಒಳಗ ಗಣಪ್ಪನ ಹಬ್ಬ ಭಾಳ ಜೋರು. ಮನಿ ಒಳಗಲ್ಲದನ ರೋಡ್ ರೋಡಿಗೆ ಸಾರ್ವಜನಿಕ ಗಣಪತಿ ಕೂಡಸ್ತಾರ. ಅನಗೋಳದಾಗ ಜೆ.ಜೆ.ಪಾಟೀಲ ಮಾಡೋ ಧೊಡ್ಡ ಗಣಪತಿಗೊಳು ಕರ್ನಾಟಕ, ಮಹಾರಾಷ್ಟ್ರದ ಮೂಲಿಮೂಲಿಗೆ ಹೋಗ್ತಿದ್ದು. ಗಣೇಶಚೌತಿ ದಿವಸ 21 ಪೂಜಾ ಮಾಡಿದ ಗಣಪತಿ ನೋಡಬೇಕಂತ. ಸಣ್ಣ ಹುಡುಗುರು ಗುರುತಿರದಿದ್ರೂ 'ಗಣಪತಿ ನೋಡ್ತೇವಿ' ಅಂತ ಮನಿ ಒಳಗ ಬಂದು ಗಣಪ್ಪಗ ಅಕ್ಷತಾ ಹಾಕಿ ಹೋಗತಿದ್ರು. ನಾವು ರಾತ್ರಿ ಊಟಾ ಮುಗಿಸಿ ಗಣಪತಿ ನೋಡಕೋತ ರಾತ್ರೆಲ್ಲಾ ಅಡ್ಡ್ಯಾಡತಿದ್ವಿ. ಗಣಪತಿ ಮುಂದ ಮೈಕ್‌ನ್ಯಾಗ ಜೋರಾಗಿ ಹಾಕೋ ಗಣಪ್ಪನ ಹಾಡುಗೋಳು ಹನ್ನೊಂದು ದಿವಸದಾಗ ನಮಗ ಬಾಯಪಾಠ ಆಗಿರ್ತಿದ್ದು. ಪಟಾಕ್ಷಿ ಸಪ್ಪಳಕ್ಕ ಕಿವಿ ಕಿವಡಾಗಿರ್ತಿದ್ದು. ಹಾಡು, ಡಾನ್ಸು, ರಂಗೋಲಿ ಸ್ಪರ್ಧಾ ನಡದು ಬಹುಮಾನಾನೂ ಕೊಡ್ತಿದ್ರು.

ಬೆಳಗಾವಿ ದೀಪಾವಳಿನೂ ಜೋರನ. ಮನಿಮನಿ ಮುಂದ ಆಕಾಶಬುಟ್ಟಿ ತೂಗಿ ಕತ್ತಲಿಗೆ ಬೆಳಕಿನ ಕಂದೀಲು ಹಿಡಿತಾವ. ಐವತ್ತು ವರ್ಷಗಳ ಕೆಳಗ ಈ ಭಾಗದಾಗ ದೀಪಾವಳಿ ಫರಾಳದ ಗದ್ದಲಾ ಭಾಳಿತ್ತು. ಬಂಧುಬಳಗಾ, ಪರಿಚಯದಾವ್ರನ್ನೆಲ್ಲಾ ಕರದು ಫರಾಳಾ ಬಡಿಸೋದು ನರಕ ಚತುರ್ದಶಿಯಿಂದನ ಸುರುವಾಗ್ತಿತ್ತು. ನಾವು ಮೂರು ಹೊತ್ತೂ ಫರಾಳಕ್ಕ ಹೋಗತಿದ್ವಿ. ಥರಥರದ ಉಂಡಿ, ಚಕ್ಕಲಿ, ಅನಾರಸ, ಕರ್ಚಿಕಾಯಿ, ಶಂಕರಪಾಳೆ, ಅವಲಕ್ಕಿ, ಚಿವಡಾಗೊಳ ಜೋಡಿ ಉಪ್ಪಿಟ್ಟು ಅಥವಾ ಮೆತ್ತನೆ ಅವಲಕ್ಕಿ ಇರತಿತ್ತು. 'ಅವರ ಮನಿ ಚಕ್ಕಲಿ ಛೊಲೊ ಆಗ್ಯಾವ. ಇವರ ಮನ್ಯಾಗ ಮೆತ್ತಗಾಗಿದ್ದು' ಅನಕೋತ ಬರತಿದ್ವಿ. ನಮ್ಮ ಸಣ್ಣಮನ್ಯಾಗ ಎಲ್ಲಾರನ್ನೂ ಕರದು ಫರಾಳಾ ಹಾಕೋ ಹೊತ್ತಿಗೆ ಕುರಿಕ್ವಾಣ ಬಿದ್ದುಹೋಗ್ತಿತ್ತು. ಈಗ ಎಲ್ಲಾ ಮಾರ್ಕೆಟ್‌ನ್ಯಾಗ ಸಿಗತಾವ. ಮಾಡೊ ತ್ರಾಸಿಲ್ಲ. ತಿನ್ನೋ ಮಜಾನೂ ಇಲ್ಲ.

ಮನಿ ಅಂಗಳದಾಗ ಕಲ್ಲುಮಣ್ಣಿಲೆ ಕಿಲ್ಲಾ ಮಾಡಿ ರಾಯಗಢ, ಸಿಂಹಗಢ ಅಂತೆಲ್ಲಾ ಹೆಸರಿಡತಿದ್ವಿ. ಅದರ ಮುಂದ ಬಂಗಲೆಗೊಳು, ಸಿನಿಮಾ ಟಾಕೀಸು, ಗಾರ್ಡನ್, ಝೂ ಮಾಡಿ ಕಾಮೆಂಟ್ರಿ ಹೇಳತಿದ್ವಿ. ಶಿವಾಜಿ ಅಫ್ಜಲ್‌ಖಾನನ್ನ ಕೊಂದದ್ದು, ಸಂಗೊಳ್ಳಿ ರಾಯಣ್ಣಂದು, ಚನ್ನಮ್ಮನ ಪ್ರಸಂಗಗೊಳ್ಳ ಅವರ ಗೊಂಬಿ ತಂದಿಟ್ಟು ದೃಶ್ಯರೂಪಕದಗತೆ ತೋರಿಸ್ತಿದ್ವಿ. ಛೊಲೊ ಕಿಲ್ಲಾಕ್ಕ ಪ್ರೈಜ್ ಕೊಡತಿದ್ರು. ದೀಪಾವಳಿ ಒಳಗ ಪಗಡಿ ಆಟದ ಗದ್ದಲಾನೂ ಜೋರ ಇರ್ತಿತ್ತು. ಓಣಿ ಮಂದೆಲ್ಲಾ ಕೂಡಿ ಎರಡು ಪಾರ್ಟಿ ಮಾಡಿ ಪಗಡಿ ಆಡತಿದ್ರು. ಮನಿ ಒಳಗೂ ಸಂಬಂಧಿಕರೆಲ್ಲಾ ಕೂಡಿ ಆಡತಿದ್ರು. ದಹಾ, ಸಹಾ, ಪಂಚವೀಸ ಅಂತ ಫಾಶಿ ಹಾಕೊ ಕವಡಿಗೊಳ ನಡುನಡುವ ಛಾ, ಅವಲಕ್ಕಿ ಸರಬರಾಜಾಗ್ತಿದ್ದು. ಬಾಯಿಗೆ ಬಾಯಿ ಹತ್ತಿ ಜಗಳ ಆಗ್ತಿತ್ತು. ಖರೆ ಮತ್ತ ಮರದಿವಸ ಆಟಕ್ಕ ತಯಾರ ಇರ್ತಿದ್ರು.

ಹೋಳಿನೂ ಹಂಗ. ಕಂಪೌಂಡ್ ಒಳಗ ಇಟ್ಟದ್ದ ಕಟಗಿ ಜೋಡಿ ಕಟಗಿಗೇಟ್ ಸುದ್ದಾ ಬೆಳಗಾಗೋದ್ರಾಗ ಮಟಾಮಾಯ ಆಗಿರ್ತಿದ್ದು. ಕಾಮಣ್ಣನ್ನ ಸುಟ್ಟ ಮರದಿವಸ ಹೆಣ್ಮಕ್ಕಳು, ಗಂಡಸರು ಎಲ್ಲಾ ಬಣ್ಣಾ ಆಡೋದು. ಹಾಲಿನಾವ್ರನ್ನೂ ಬಿಡದ ಬಣ್ಣಾ ಹಾಕತಿದ್ರು. ಅವತ್ತ ಯಾವ ಕೆಲಸದಾವ್ರೂ ಕೆಲಸಕ್ಕ ಬರ್ತಿದ್ದಿಲ್ಲ. ಎಲ್ಲಾರ ಹೋಳಿ ಒಂದಿನ ಆದ್ರ ಶಹಾಪೂರ ಹೋಳಿ ಬ್ಯಾರೇ ದಿವಸ ಇರ್ತಿತ್ತು. ಹರ್‍ಯಾರ ಗುಂಪು ಮನಿಮನಿಗೆ ಬಂದು ಬಣ್ಣಾ ಹಚ್ಚಿ ಹೋಗ್ತಿತ್ತು.

ಗೋವಾ ಬೆಳಗಾವಿಗೆ ಸಮೀಪ. ಚೋರ್ಲಾ ಘಾಟ್ ದಾಟಿದ್ರ ಗೋವಾ ಬಂತು. ಹಿಂಗಾಗಿ ಇಲ್ಲೆ ಕೊಂಕಣಿ ಸಂಸ್ಕೃತಿನೂ ಕೂಡಿಕೊಂಡದ. ಹೆಂಗಸರು



ಖಾನಾಪುರ ತಾಲ್ಲೂಕಿನ ಚಿಗಳೆ ಅರಣ್ಯದ ಸೊಬಗು